ಪ್ರಜಾವಾಣಿ

Sunday, August 28, 2011

ಕ್ರಿಕೆಟ್: ಅಂತರ ಕಾಲೇಜ್ ಪ್ರೀಮಿಯರ್ ಲೀಗ್

# 24 ತಂಡಗಳಿಂದ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಾನ ನಗರಿ ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ಸೆಪ್ಟೆಂಬರ್ 18ರಿಂದ 25ರ ವರೆಗೆ ಅಖಿಲ ಭಾರತ ಅಂತರ ಕಾಲೇಜ್ ಕ್ರಿಕೆಟ್ ಟೂರ್ನಿಯಾದ 'ಕಾಲೇಜ್ ಪ್ರೀಮಿಯರ್ ಲೀಗ್' (ಸಿಪಿಎಲ್) ಟ್ವೆಂಟಿ-20 ಟೂರ್ನಿ ನಡೆಯಲಿದೆ.

ಜೈನ್ ಕಾಲೇಜ್ ಆಶ್ರಯದಲ್ಲಿ ನಡೆಯಲಿರುವ ಈ ಟೂರ್ನಿಗೆ ವಿವಿಧ ಕಂಪೆನಿಗಳು ಸಹಭಾಗಿತ್ವ ವಹಿಸಲಿವೆ. ದೇಶದ ಪ್ರತಿಷ್ಠಿತ ವಿವಿಧ 24 ಕಾಲೇಜುಗಳ ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. ಇದರಲ್ಲಿ ಕರ್ನಾಟಕದ 16 ತಂಡಗಳಿವೆ.

ಲೀಗ್ ಪಂದ್ಯಗಳು ಸೇಂಟ್ ಜಾನ್ಸ್ ಕಾಲೇಜ್ ಕ್ರೀಡಾಂಗಣದಲ್ಲಿ, ಹೊನಲು ಬೆಳಕಿನಡಿಯಲ್ಲಿ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳು ಎನ್‌ಆರ್‌ಐ ಕ್ರೀಡಾಂಗಣದಲ್ಲಿ ನಡೆಯಲಿವೆ ಎಂದು ಮಾಜಿ ಕ್ರಿಕೆಟಿಗ ಸದಾನಂದ್ ವಿಶ್ವನಾಥ್ ಶನಿವಾರ ತಿಳಿಸಿದರು

ಭವಿಷ್ಯದ ದಿನಗಳಲ್ಲಿ ಐಪಿಎಲ್ ನಂತಹ ಚುಟುಕು ಕ್ರಿಕೆಟ್, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಇದು ನೆರವಾಗಲಿ ಎಂದರು. ಇದೇ ಸಂದರ್ಭದಲ್ಲಿ ಎಲ್ಲಾ ತಂಡಗಳ ನಾಯಕರನ್ನು ಹಾಗೂ ತಂಡಗಳ ಹೆಸರನ್ನು ಅನಾವರಣಗೊಳಿಸಲಾಯಿತು. ಕ್ರಿಕೆಟಿಗ ಸುನಿಲ್ ಜೋಶಿ, ಕೆಎಸ್‌ಸಿಎಯ ತಾಂತ್ರಿಕ ಅಧಿಕಾರಿ ಶ್ರೀನಿವಾಸ ಮೂರ್ತಿ ಇದ್ದರು.